ವಿಷಯ : ವಿದ್ಯುತ್ ಅಭಾವದ ಬಗ್ಗೆ.

ಹರಪನಹಳ್ಳಿ ತಾಲ್ಲೂಕಿನಲ್ಲಿ ವಿದ್ಯುತ್ ಒದಗಿಸಲಾದ ಪಂಪುಸೆಟ್ಟುಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 520 (787)

ಶ್ರೀ ಬಿ. ಪೆಚ್. ಯಂಕಾ ನಾಯಕ್ (ಹರಪನಹಳ್ಳಿ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಒದಗಿಸಲಾದ ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ ಎಷ್ಟು ?

ಆ) ಈಗ ಹಾಲಿ ಎಷ್ಟು ಅರ್ಜಿಗಳು ವಿದ್ಯುಚ್ಛಕ್ತಿಗಾಗಿ ತಮ್ಮ ಇಲಾಖೆಯಲ್ಲಿ ಬಾಕಿ ಇರುತ್ತವೆ?

ಇ) ಇದರ ಶೀಘ್ರ ನಿವಾರಣೆಗಾಗಿ ಎಷ್ಟು ಉಪಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆ?

ಈ) ಬಾಕಿ ಇರುವ ಅರ್ಜಿಗಳನ್ನು ಯಾವಾಗ ವಿಲೇವಾರಿ ಮಾಡಲಾಗುವದು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ದಿನಾಂಕ 30–11–90 ರಲ್ಲಿರುವಂತೆ, ಹರಪನಹಳ್ಳಿ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಒದಗಿಸಲಾಗಿರುವ ನೀರಾವರಿ ಪಂಪುಸೆಟ್ಟುಗಳ ಒಟ್ಟು ಸಂಖ್ಯೆ 2945.

ಆ) ಹಾಲಿ 504 ಅರ್ಜಿಗಳು ಮಂಡಳಿಯ ಕ್ರಮಕ್ಕಾಗಿ ಬಾಕಿ ಉಳಿದಿವೆ.

ಇ) ಹರಪನಹಳ್ಳಿ ತಾಲ್ಲೂಕಿನಲ್ಲಿ ತೆಲ್ಲ ಮತ್ತು ಪುನಬಘಟ್ಟಗಳಲ್ಲಿ ಹೊಸ ಉಪ ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ಅಲ್ಲದೇ, ಹರಪನಹಳ್ಳಿಯಲ್ಲಿರುವ ಉಪ ವಿದ್ಯುತ್ ಕೇಂದ್ರದ ಸಾಮರ್ಥ್ಯವನ್ನು ಹೆಚ್ಚಿಸಲು ಕ್ರಮ ಕೈಗೊಂಡಿದೆ. ಹಲವಾಗಲು ಮತ್ತು ಅರಸೀಕೆರೆಗಳಲ್ಲೂ ಸಹಾ ಹೊಸ ಉಪ ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸುವ ಪ್ರಸ್ತಾವನೆಗಳು ಪರಿಶೀಲನೆಯಲ್ಲಿದೆ.

ಈ) ಹರಪನಹಳ್ಳಿ ತಾಲ್ಲೂಕಿಗೆ ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣಕ್ಕಾಗಿ ಈ ಮುಂಚೆ ನಿಗದಿ ಪಡಿಸಿದ್ದ ಗುರಿಯನ್ನು 300 ರಿಂದ 600 ಕ್ಕೆ ಹೆಚ್ಚಿಸಿದೆ. ಈ ಗುರಿಯನ್ನು ಮಾರ್ಚ್ 1991ರ ಅಂತ್ಯದ ಳಗೆ ಸಾಧಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಂಡಿದೆ.

ವಿಷಯ :– ರೇಷ್ಮೆ ಬೆಳೆಗೆ ಉತ್ತೇಜನ ಕೊಡುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 521 (947)

ಶ್ರೀ ಅಂಜನ ಮೂರ್ತಿ (ನೆಲಮಂಗಲ) : ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಯಾವ ಜಿಲ್ಲೆಯಲ್ಲಿ ಹೆಚ್ಚಿನ ರೇಷ್ಮೆ ಬೆಳೆಯುತ್ತಾರೆ ?

ಆ) ಮಿಕ್ಕ ಪ್ರದೇಶಗಳಲ್ಲಿ ರೇಷ್ಮೆ ಅಭಿವೃದ್ಧಿಗೊಳಿಸಲು ಹಾಗೂ ಬೆಳೆಗಾರರಿಗೆ ಉತ್ತೇಜನ ಕೊಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು) :–

ಅ) ರಾಜ್ಯದ ಮೈಸೂರು, ಕೋಲಾರ, ಬೆಂಗಳೂರು ಗ್ರಾಮಾಂತರ, ಮಂಡ್ಯ ಮತ್ತು ತುಮಕೂರು ಜೀಗೆ 5 ಜಿಲ್ಲೆಗಳಲ್ಲಿ ಹೆಚ್ಚಿನ ರೇಷ್ಮೆ ಬೆಳೆಯುತ್ತಾರೆ.

ಆ) ಮಿಕ್ಕ ಪ್ರದೇಶಗಳಲ್ಲಿ ರೇಷ್ಮೆ ಅಭಿವೃದ್ಧಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳು.

1) ತಾಂತ್ರಿಕ ಸಿಬ್ಬಂದಿಯವರು ರೇಷ್ಮೆ ಕೃಷಿ ಬಗ್ಗೆ ತಿಳುವಳಿಕೆಯನ್ನು ರೈತರಿಗೆ ಕೊಡುವುದು.

2) ಸರ್ಕಾರದಲ್ಲಿ ಹಿಪ್ಪುನೇರಳೆ ಕಡ್ಡಿ ದೊರೆಯುವಂತೆ ಅನುಕೂಲ ಕಲ್ಪಿಸುವುದು.

3) ಹಿಪ್ಪುನೇರಳೆ ವ್ಯವಸಾಯ ಕೈಗೊಳ್ಳಲು ಹುಳು ಸಾಕಣೆ ಉಪಕರಣಗಳನ್ನು ಕೊಳ್ಳಲು ಹುಳು ಸಾಕಣೆ ಮನೆ ಕಟ್ಟಲು, ನೂಲು ಬಿಚ್ಚಾಣಿಕೆ ಘಟಕಗಳನ್ನು ಸ್ಥಾಪಿಸಲು ಬ್ಯಾಂಕುಗಳಿಂದ ಸಾಲ ಒದಗಿಸುವುದು.

4) ರೇಷ್ಮೆ ಕೃಷಿ ಬಗ್ಗೆ ಮತ್ತು ನೂಲು ಬಿಚ್ಚಾಣಿಕೆ ಬಗ್ಗೆ ತರಬೇತಿ ಕೊಡುವುದು.

5) ನೂಲು ಬಿಚ್ಚಾಣಿಕೆ ಘಟಕಗಳನ್ನು ಸ್ಥಾಪಿಸಲು ಸಮಾಯಧನ ಕೊಡುವುದು.

6) ಸಕಾಲದಲ್ಲಿ ಒಳ್ಳೆ ಗುಣಮಟ್ಟದ ಮೊಟ್ಟೆಗಳನ್ನು ಒದಗಿಸಲು 10 ಗ್ರೈನೇಜುಗಳನ್ನು ಸ್ಥಾಪಿಸಲಾಗಿದೆ. ಇವುಗಳಲ್ಲಿ 4 ದೊಡ್ಡ ಪ್ರಮಾಣದ ಗ್ರೈನೇಜುಗಳು ವರ್ಷದಲ್ಲಿ ಒಂದು ಗ್ರೈನೇಜು 75 ಲಕ್ಷ ಮೊಟ್ಟೆ ಉತ್ಪನ್ನ ಮಾಡುವ ವ್ಯವಸ್ಥೆ ಹೊಂದಿರುತ್ತದೆ. ಒಂದು ಗ್ರೈನೇಜು ವರ್ಷದಲ್ಲಿ 30 ಲಕ್ಷ ಮೊಟ್ಟೆ ಉತ್ಪನ್ನ ಮಾಡುವ ವ್ಯವಸ್ಥೆ ಇದೆ.